ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಉದ್ದೇಶಿಸಿದ್ದು, ಈ ಭಾಗದ ಧಾರವಾಡ ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲು ಹೊಸ ಕೈಗಾರಿಕಾ ನೀತಿ 2014–19ರಲ್ಲಿ ಪ್ರಸ್ತಾಪಿಸಿದೆ.

• ಧಾರವಾಡ ಕೊಪ್ಪಳ ರಾಯಚೂರು ಮುಖಾಂತರ ರಾಜ್ಯ ಕೈಗಾರಿಕಾ ಕಾರಿಡಾರ್ ಸ್ಥಾಪನೆಗೆ.

• ಬಂಡವಾಳ ವಲಯ/(ಎಸ್.ಐ.ಆರ್) ಪ್ರಕಟಿಸಲಾಗಿದೆ – ಅದರಂತೆ, ಬೆಂಗಳೂರಿನಲ್ಲಿ ನಟ್ಟತೆಯನ್ನು ಕಡಿಮೆ ಮಾಡಿ ಕೈಗಾರಿಕಾಭಿವೃದ್ಧಿಯ ಮೂಲಕ ಇತರ ಪ್ರದೇಶಗಳನ್ನು ಬೆಳೆಸಲು ಅವಕಾಶವುಳ್ಳ ಪ್ರದೇಶಗಳನ್ನು ವಿಶೇಷ ಬಂಡವಾಳ ವಲಯಗಳೆಂದು (ಎಸ್ಐಆರ್‌ಗಳು) ಪ್ರಕಟಿಸಿ ಗಣನೀಯವಾಗಿ ಮೂಲ ಸೌಕರ್ಯಗಳನ್ನು ನಿರ್ಮಿಸಲು ಬೆಂಬಲವನ್ನು ಒದಗಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ ಧಾರವಾಡ, ಬೆಳಗಾವಿ, ಹಾವೇರಿ, ಗದಗ ಜಿಲ್ಲೆಗಳಿಗೆ ಅನ್ವಯಿಸುವಂತೆ ಈ ರೀತಿಯ ಒಂದು ಎಸ್ಐಆರ್ ವಲಯವನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ.

ಕೈಗಾರಿಕಾ ನೀತಿ 2014–19ರನ್ವಯ ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಘಟಕಗಳಿಗೆ ಈ ಕೆಳಕಂಡ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳನ್ನು ಘೋಷಿಸಿದೆ.

ಎ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

ಬಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ

ಸಿ) ಭೂಪರಿವರ್ತನೆ ಶುಲ್ಕದ ಮರುಪಾವತಿ

ಡಿ) ಪ್ರವೇಶ ತೆರಿಗೆಯಿಂದ ವಿನಾಯಿತಿ

ಇ) ಇಟಿಪಿಗಳನ್ನು ಸ್ಥಾಪಿಸಲು ಸಹಾಯಧನ

ಎಫ್) ಆಂಕರ್ ಘಟಕ ಸಹಾಯಧನ

ಜಿ) ಬೃಹತ್ ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಕೈಗಾರಿಕೆಗಳ ನಿವ್ವಳ ವ್ಯಾಟ್ ಸಾಲ ಮತ್ತು ಸಿಎಸ್‌ಟಿಯ ಮರುಪಾವತಿ.

ಕೈಗಾರಿಕಾ ಇಲಾಖೆಯಡಿಯಲ್ಲಿ ಜಿಮ್ ನಡೆಸುವುದು

1134 (2070) ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್) :– ಮಾನ್ಯ ಮುಖ್ಯಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ :–

ಅ) ಕೈಗಾರಿಕಾ ಇಲಾಖೆಯಡಿಯಲ್ಲಿ ಜಿಮ್ ನಡೆಸುವ ಉದ್ದೇಶವಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಹಿಂದಿನ 'ಜಿಮ್' ಗಳನ್ನು ಸುಧಾರಣೆ ಮಾಡಲು ಹೊಸ ಯೋಜನೆಗಳನ್ನೇನಾದರೂ ಸರ್ಕಾರ ಅಳವಡಿಸಿದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು) :–

ಅ) ಮುಂಬರುವ ವರ್ಷಗಳಲ್ಲಿ ಬಂಡವಾಳ ಹೂಡಿಕೆ ಸಮಾವೇಶ (ಜಿಮ್) ನಡೆಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.

ಆ) ಜಿಮ್ ದಿನಾಂಕ ಇನ್ನೂ ನಿರ್ಧಾರವಾಗಿಲ್ಲದಿರುವುದರಿಂದ, ಏನೂ ಕ್ರಮ ಕೈಗೊಂಡಿರುವುದಿಲ್ಲ.

ಇ) ಸರ್ಕಾರದ ಮುಂದೆ ಸದ್ಯಕ್ಕೆ ಯಾವುದೇ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಕೈಗಾರಿಕೆಗೆ ಅನುಮತಿ ನೀಡುವುದು

1135 (2071) ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ :–

ಅ) 2013–14 ಮತ್ತು 2014–15ರಲ್ಲಿ ಹೊಸದಾಗಿ ಕಬ್ಬಿಣದ ಅದಿರು ಗಣಿಗಾರಿಕೆಗಳನ್ನು ನಡೆಸಲು ವಿವಿಧ ಕಂಪನಿಗಳಿಗೆ ಎನ್.ಓ.ಸಿ. ನೀಡಲಾಗಿದೆಯೇ ; (ವಿವರ ಒದಗಿಸುವುದು)

ಆ) ಹೊಸದಾಗಿ ಗಣಿಗಾರಿಕೆ ನಡೆಸಲು ಅನುಮತಿ ಕೋರಿ ಅರ್ಜಿ ಕರೆಯಲಾಗಿದೆಯೇ ; (ಸಂಪೂರ್ಣ ವಿವರ ಒದಗಿಸುವುದು)

ಇ) ಪ್ರಸ್ತುತ ಸರ್ಕಾರ ಮತ್ತು ಖಾಸಗಿ ವಲಯದಲ್ಲಿ ಎಷ್ಟು ಕಂಪನಿಗಳು ಗಣಿಗಾರಿಕೆಯನ್ನು ನಡೆಸುತ್ತಿವೆ; ಎಷ್ಟು ಪ್ರದೇಶದ ವಿಸ್ತೀರ್ಣದಲ್ಲಿ ಗಣಿಗಾರಿಕೆಗಳಿಗೆ ಅನುಮತಿಯನ್ನು ನೀಡಲಾಗಿದೆ? (ವಿವರ ಒದಗಿಸುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು) :–

ಅ) 2013–14 ಮತ್ತು 2014–15ರಲ್ಲಿ ಹೊಸದಾಗಿ ಕಬ್ಬಿಣದ ಅದಿರು ಗಣಿಗಾರಿಕೆಗಾಗಿ ಅನುಮತಿ ನೀಡುರುವುದಿಲ್ಲ.

ಆ) 2013–14 ಮತ್ತು 2014–15ನೇ ಸಾಲಿನಲ್ಲಿ ಕಬ್ಬಿಣದ ಅದಿರಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿ ಯಾವುದೇ ಅರ್ಜಿ ಕರೆಯಲಾಗಿರುವುದಿಲ್ಲ.

ಇ) ಪ್ರಸ್ತುತ ಸರ್ಕಾರಿ ಸ್ವಾಮ್ಯದ NMDC ಕಂಪನಿಗೆ 02 and MML ಸಂಸ್ಥೆಗೆ 02 ಒಟ್ಟು 04 ಗುತ್ತಿಗೆಗಳಿಗೆ ಒಟ್ಟು 1472.70 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ.

ಮುಂದುವರೆದು, ಒಟ್ಟು 21 ಖಾಸಗಿ ಕಂಪನಿಗಳು ಪ್ರಸ್ತುತ ಕಬ್ಬಿಣದ ಅದಿರಿನ ಗಣಿಗಾರಿಕೆಯನ್ನು ನಡೆಸುತ್ತಿದ್ದು ಇದರ ಒಟ್ಟು ಮಂಜೂರಾದ ವಿಸ್ತೀರ್ಣ 3398.48 ಹೆಕ್ಟೇರ್ ಪ್ರದೇಶ ಇರುತ್ತದೆ. ವಿವರಗಳನ್ನು ಅನುಬಂಧ–01ರಲ್ಲಿ ಒದಗಿಸಿದೆ.